ರಾಜ್ಯದ ಕಲಾವಿಧರ ಮಾಸಾಶನದ ಬಗ್ಗೆ

೧೫೬೮. ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ೧೯೪೪–೪೫, ೧೯೪೫–೪೬ ಮತ್ತು ೧೯೪೬ರಲ್ಲಿ ಕಲಾವಿಧರ ಮಾಸಾಶನಕ್ಕಾಗಿ ಬಂದಿರುವ ಮನವಿಗಳ ಸಂಖ್ಯೆ ಎಷ್ಟು ?

(ಆ) ಕಳೆದ ಮೂರು ವರ್ಷಗಳಿಂದ ಈ ಕಲಾವಿಧರಿಗೆ ಮಾಸಾಶನ ನೀಡಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಇ) ಬಡ ಮತ್ತು ವಯೋವೃದ್ಧ ಕಲಾವಿಧರಿಗೆ ಮಾಸಾಶನ ನೀಡಲು ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

(ಅ) ೧೯೪೪–೪೫ರಲ್ಲಿ ೧೭೯೧ ಮನವಿಗಳು
೧೯೪೫–೪೬ರಲ್ಲಿ ೧೨೫೧ ಮನವಿಗಳು
೧೯೪೬–೪೭ರಲ್ಲಿ ೪೫೫ ಮನವಿಗಳು

(ಆ) ಮತ್ತು (ಇ) ೧೯೪೪–೪೫ ಮತ್ತು ೧೯೪೫–೪೬ನೇ ಸಾಲಿನಲ್ಲಿ ಮಂಜೂರು ಮಾಡಿದ ಮಾಸಾಶನದ ವಿವರ ಕೆಳಕಂಡಂತಿದೆ.—

೧೯೪೪–೪೫ ... ೭೦೫ ಜನರು
೧೯೪೫–೪೬ ... ೭೭೬ ಜನರು

೧೯೪೬–೪೭ನೇ ಸಾಲಿನಲ್ಲಿ ಬಂದಿರುವ ಮನವಿಗಳು ಸರ್ಕಾರದ ತೀವ್ರ ಪರಿಶೀಲನೆಯಲ್ಲಿವೆ

ಚರ್ಮ–ಕೈಗಾರಿಕೆ ಡಿಪ್ಲೊಮೊ ಓದುತ್ತಿರುವ ವಿದ್ಯಾರ್ಥಿಗಳಿಗೆ ಬಸ್ ಪಾಸ್ ಕೊಡುವ ಬಗ್ಗೆ

೧೫೬೯. ಶ್ರೀ ಕೆ. ಅಮರನಾಥಶೆಟ್ಟಿ (ಮೂಡಬಿದಿರೆ) ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂಧೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚರ್ಮ ಕೈಗಾರಿಕೆ ಡಿಪ್ಲೊಮಾದಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಕಾಲೇಜಿಗೆ ಹೋಗಿ ಬರಲು ಇತರ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಕೊಡುವಂತೆ ಬೆಂಗಳೂರು ನಗರ ಸಾರಿಗೆ ಬಸ್ ಪಾಸ್ ಕೊಡಲಾಗುತ್ತಿದೆಯೇ ?

ಆ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು ?

ಇ) ಇವನ್ನು ಮುಂದಾದರೂ ಅವರಿಗೆ ಕಾಲೇಜಿಗೆ ಹೋಗಿ ಬರಲು ನಗರ ಸಾರಿಗೆ ಬಸ್ ಪಾಸ್ ಗಳನ್ನು ಕೊಡಲಾಗುವುದೇ ?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂಧೀಖಾನೆ ಮಂತ್ರಿಗಳು).—

ಅ) ಇಲ್ಲ.

ಆ) ವೃತ್ತಿ ವ್ಯಾಸಂಗವಾಗಿರುವುದರಿಂದ ಕೊಡುತ್ತಿಲ್ಲ.

ಇ) ಮೇಲ್ಕಂಡ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.